[redacted]



# ಬಿಜೆಪಿ ಮಾಧ್ಯಮ ಕಛೇರಿ ಉದ್ಘಾಟನೆ



ಬೆಳಗಾವಿ: ಲೋಕಸಭಾ ಚುನಾವಣೆಯು ಕಾವು ಪ್ರಾರಂಭವಾಗುವ ಬಿರುಸಿನ ಚಟುವಟಿಕೆಯಲ್ಲಿ, ಭಾರತೀಯ ಜನತಾ ಪಾರ್ಟಿ (ಬಿಜೆಪಿ) ಬೆಳಗಾವಿಯ ಸದಾಶಿವನಗರದಲ್ಲಿ ತನ್ನ ಮಾಧ್ಯಮ ಕಚೇರಿ ಉದ್ಘಾಟಿಸಲಾಯಿತು

ಈ ಘಟನೆಗಳು ಹಲವಾರು ಪ್ರಮುಖ ರಾಜಕೀಯ ವ್ಯಕ್ತಿಗಳ ಉಪಸ್ಥಿತಿಗೆ ಸಾಕ್ಷಿಯಾಯಿತು, ಈ ಪ್ರದೇಶದಲ್ಲಿ ಪಕ್ಷದ ಬಲವಾದ ಪ್ರಚಾರದ ತಳ್ಳುವಿಕೆಯನ್ನು ಸೂಚಿಸುತ್ತದೆ. ಮಾತನಾಡಿದ ಜಗದೀಶ್ ಶೆಟ್ಟರ್ 17 ನೇ ಏಪ್ರಿಲಗೆ ನಾಮ ಪತ್ರ ಸಲ್ಲಿಸುವುದಾಗಿ ಹೇಳಿದ್ದಾರೆ. ಬೆಳಗಾವಿ ಲೋಕಸಭಾ ಚುನಾವಣೆಯ ಉಸ್ತುವಾರಿಯಾಗಿ ನೇಮಕಗೊಂಡಿರುವ ಹಣಮಂತ ನರಾಣಿ, ಬೆಳಗಾವಿ ಲೋಕಸಭಾ ಅಭ್ಯರ್ಥಿ ಜಗದೀಶ್ ಶೆಟ್ಟರ್ ಹಾಗೂ ಮಾಜಿ ಮುಖ್ಯಮಂತ್ರಿ ಸೇರಿದಂತೆ ಗಣ್ಯರು ಆಗಮಿಸಿದ್ದರು. ಅವರ ಉಪಸ್ಥಿತಿಯು ಮುಂಬರುವ ಚುನಾವಣೆಯಲ್ಲಿ ಗೆಲುವು ಸಾಧಿಸುವ ಪಕ್ಷದ ಬದ್ಧತೆಯನ್ನು ಒತ್ತಿಹೇಳುತ್ತದೆ.

ಉದ್ಘಾಟನಾ ಸಮಾರಂಭದಲ್ಲಿ ಪ್ರಭಾಕರ ಕೋರೆ, ಮಹಾಂತೇಶ ಕವಟಗಿಮಠ, ಸವಿತಾ ಕಾಂಬಳೆ ಸೇರಿದಂತೆ ಬೆಳಗಾವಿಯ ಪ್ರಮುಖರು ಭಾಗವಹಿಸಿದ್ದರು. ಬೆಳಗಾವಿಯ ಸಂಸದೆ ಮಂಗಳಾ ಅಂಗಡಿ, ಮಾಜಿ ಶಾಸಕ ಹಾಗೂ ರಾಜ್ಯ ಬಿಜೆಪಿ ಉಪಾಧ್ಯಕ್ಷ ಅನಲ್ ಬೆನಕೆ , ಬಿಜೆಪಿ ಮಹಾನಗರ ಜಿಲ್ಲಾ ಅಧ್ಯಕ್ಷೆ ಗೀತಾ ಸುತಾರ್ ಈ ಸಂದರ್ಭದಲ್ಲಿ ಆಗಮಿಸಿದ್ದರು. ಗ್ರಾಮೀಣ ಜಿಲ್ಲಾಧ್ಯಕ್ಷರಾದ ಸುಭಾಷ ಪಾಟೀಲ, ಬೆಳಗಾವಿ ಲೋಕಸಭಾಧ್ಯಕ್ಷರಾದ ಸಂಜಯ ಪಾಟೀಲರ ಉಪಸ್ಥಿತಿಯಿಂದ ಕಾರ್ಯಕ್ರಮ ಮತ್ತಷ್ಟು ಗಮನ ಸೆಳೆಯಿತು. ನಗರ ಉಸ್ತುವಾರಿ ವಹಿಸಿದ್ದ ರಮೇಶ ದೇಶಪಾಂಡೆ ಉದ್ಘಾಟನೆಯ ಸುಗಮ ಆಯೋಜನೆಗೆ ಚಾಲನೆ ನೀಡಿದರು.

ಶರತ್ ಹೆಗಡೆ ಸೇರಿದಂತೆ ರಾಜ್ಯಮಾಧ್ಯಮ ಸಮಿತಿಯ ಪ್ರಮುಖರು ಪಾಲ್ಗೊಂಡಿದ್ದು, ತಳಮಟ್ಟದ ತೊಡಗಿಸಿಕೊಳ್ಳುವಿಕೆಗೆ ಪಕ್ಷದ ಸಮಗ್ರ ವಿಧಾನವನ್ನು ಒತ್ತಿ ಹೇಳಿದರು. ಪದಾಧಿಕಾರಿಗಳು, ನಗರ ಅಧಿಕಾರಿಗಳು ಮತ್ತು ಪಕ್ಷದ ಸಮರ್ಪಿತ ಕಾರ್ಯಕರ್ತರ ಅಸಾಧಾರಣ ಶ್ರೇಣಿಯೊಂದಿಗೆ, ಬಿಜೆಪಿ ತನ್ನ ಒಗ್ಗಟ್ಟು ಮತ್ತು ಲೋಕಸಭೆ ಚುನಾವಣೆಯಲ್ಲಿ ಗಮನಾರ್ಹ ಪ್ರಗತಿ ಸಾಧಿಸುವ ಸಂಕಲ್ಪವನ್ನು ಪ್ರದರ್ಶಿಸಿತು.

ಮಾಧ್ಯಮ ಕಚೇರಿ ಉದ್ಘಾಟನೆಯು ತೀವ್ರ ಚುನಾವಣಾ ಕದನಕ್ಕೆ ವೇದಿಕೆಯನ್ನು ಸಿದ್ಧಪಡಿಸುತ್ತದೆ, ಏಕೆಂದರೆ ಬಿಜೆಪಿ ಬೆಳಗಾವಿ ಮತ್ತು ಅದರಾಚೆ ತನ್ನ ಸ್ಥಾನವನ್ನು ಭದ್ರಪಡಿಸುವ ಗುರಿಯನ್ನು ಹೊಂದಿದೆ.

# ಹರ್ತಿ ನರೇಗಾ ಕಾಮಗಾರಿ ಪರಿಶೀಲನೆ, ಮತದಾನ ಜಾಗೃತಿ ಅಭಿಯಾನ



ಗದಗ : ತಾಲೂಕಿನ ಹರ್ತಿ ಗ್ರಾಮದಲ್ಲಿ ನರೇಗಾದಡಿ ಪ್ರಗತಿಯಲ್ಲಿದ್ದ ಬದು ನಿರ್ಮಾಣ ಕಾಮಗಾರಿಯನ್ನು ತಾ.ಪಂ. ಸಹಾಯಕ ನಿರ್ದೇಶಕ (ಗ್ರಾ.ಉ) ಕುಮಾರ ಪೂಜಾರ ಪರಿಶೀಲಿಸಿ ಗ್ರಾಮದಲ್ಲಿನ ಕೂಲಿಕಾರರು ಉದ್ಯೋಗಕ್ಕಾಗಿ ಬೇರೆ ಊರು ಗಳಿಗೆ ವಲಸೆ ಹೋಗು ವುದನ್ನು ತಪ್ಪಿಸಲು ವಲಸೆ ಯಾಕ್ರಿ ನಮ್ಮೂರಲ್ಲೇ ಉದ್ಯೋ ಗ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದ್ದು ಕೂಲಿಕಾರ್ಮಿಕರಿಗೆ ಸ್ವಗ್ರಾಮದಲ್ಲಿ0ೆ?? ನಿರಂತರವಾದ ಉದ್ಯೋಗವನ್ನು ಕಲ್ಪಿಸಲಾಗುವುದು. ಅದ್ದರಿಂದ ಉದ್ಯೋಗ ಖಾತ್ರಿ ಅಭಿಯಾನದಡಿ ಕೆಲಸ ಪಡೆಯಲು ನಮೂನೆ–06 ಅರ್ಜಿ ಸಲ್ಲಿಸಬೇಕು ಎಂದು ಹೇಳಿದರು.

ಎ.ಡಿ.ಪಿ.ಸಿ ಕಿರಣಕುಮಾರ ಮಾತನಾಡಿ ನರೇಗಾ ಯೋಜನೆಯ ನಿಯಮಾನುಸಾರ ಕೂಲಿ ಕಾರ್ಮಿಕರು ಕೆಲಸ ನಿರ್ವಹಣೆ ಮಾಡಬೇಕು, ಹಾಜರಾತಿಯಲ್ಲಿ ಕಡ್ಡಾಯವಾಗಿ ಹೆಸರಿದ್ದ ಕೂಲಿಕಾರರು ಮಾತ್ರ ಕೆಲಸಕ್ಕೆ ಹಾಜರಾಗಬೇಕು ಹಾಗೂ ಕೆಲಸದ ಪ್ರಮಾಣಕ್ಕೆ ತಕ್ಕಂತೆ ಕೂಲಿ ಮೊತ್ತ ಪಾವತಿಸಲಾಗುವದು, ಗಂಡು ಮತ್ತು ಹೆಣ್ಣಿಗೆ ಸಮಾನ ಕೂಲಿ ನೀಡಲಾಗುವುದು ಎಂದು ತಿಳಿಸಿದರು.2024 ರ ಲೋಕಸಭೆ ಚುನಾವಣೆಯ ಪ್ರಯುಕ್ತ ಕಾಮಗಾರಿ ಸ್ಥಳದಲ್ಲಿ ಪಿ ಡಿ ಓ ಶಿವಲೀಲಾ ಅಂಗಡಿ ಹಾಜರಿದ್ದ ಕೂಲಿಕಾರರನ್ನು ಉದ್ದೇಶಿಸಿ ಮಾತನಾಡಿ ಪ್ರತಿಯೊಬ್ಬ ಮತದಾರರು ಕೂಡ ಮತದಾನ ಮಾಡುವುದು ಅವರ ಆದ್ಯ ಕರ್ತವ್ಯವಾಗಿರುತ್ತದೆ. 18 ವರ್ಷ ತುಂಬಿದ ಯುವ ಮತದಾರರಿಗೆ VHA App ದಲ್ಲಿ ನೋಂದಾಯಿಸಿಕೊಂಡು ಮತದಾರರಾಗಲು ಕರೆ ನೀಡಿದರು. ಮತದಾನ ಪ್ರಕ್ರಿ0ೆ?ಯಿಂದ ಯಾವೊಬ್ಬ ವ್ಯಕ್ತಿಯು ಕೂಡ ಹೊರಗುಳಿಯಬಾರದು ಎಂದು ತಿಳಿಸಿದರು, ನಂತರ ಹಾಜರಿದ್ದ ಕೂಲಿಕಾರರಿಗೆ ಮತದಾನ ಪ್ರತಿಜ್ಞಾ ವಿಧಿ ಭೋದಿಸಿದರು.

ಈ ಸಂದರ್ಭದಲ್ಲಿ ನರೇಗಾ ತಾಂತ್ರಿಕ ಸಹಾಯಕ ಅಜಯ ಅಬ್ಬಿಗೇರಿ, ಬಿ.ಎಫ್.ಟಿ ಸಿದ್ದಯ್ಯ ಹೀರೆಮಠ, ಗ್ರಾಮ ಪಂಚಾಯತ ಸಿಬ್ಬಂದಿಗಳು, ನರೇಗಾ ಕಾಯಕ ಬಂಧುಗಳು, ನರೇಗಾ ನೋಂದಾಯಿತ ಕೂಲಿಕಾರರು ಹಾಜರಿದ್ದರು.

# ಯಾರನ್ನು ದ್ವೇಷಿಸುವವರು, ಕಷ್ಟಕೊಡುವವರು ನಾವಲ್ಲ; ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಸಂಸ್ಕೃತಿ ನಮ್ಮದು : ಲಕ್ಷ್ಮೀ ಹೆಬ್ಬಾಳಕರ್



ಬೆಳಗಾವಿ : 20 ವರ್ಷ ಬೆಳಗಾವಿ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಬಿಜೆಪಿ ಸಂಸದರು ಕೇಂದ್ರ ಸರಕಾರದಿಂದ ಎಷ್ಟು ಕೆಲಸ ತಂದಿದ್ದಾರೆ? ಕ್ಷೇತ್ರದ ಯಾವ ಯಾವ ಪ್ರದೇಶಕ್ಕೆ ಭೇಟಿ ನೀಡಿದ್ದಾರೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಪ್ರಶ್ನಿಸಿದ್ದಾರೆ. ಬೆಳಗಾವಿ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧ ಪ್ರದೇಶದಲ್ಲಿ ಗುರುವಾರ ಸಂಜೆ ಲೋಕಸಭಾ ಚುನಾವಣೆ ಪ್ರಚಾರ ನಡೆಸಿದ ಅವರು, ಬೆಳಗಾವಿ ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ 10 ತಿಂಗಳಲ್ಲಿ ಸಾವಿರ ಕೋಟಿ ರೂ. ಕೆಲಸಗಳಾಗಿವೆ. ಅಲ್ಲಿ ಅಭಿವೃದ್ಧಿ ಕೆಲಸಗಳು ನಿರಂತರವಾಗಿ ನಡೆಯುತ್ತಿವೆ. ಈ ಬಾರಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಮೃಣಾಲ ಹೆಬ್ಬಾಳಕರ್ ಅವರನ್ನು ಆಯ್ಕೆ ಮಾಡಿದಲ್ಲಿ ಗ್ರಾಮೀಣ ಕ್ಷೇತ್ರದ ಮಾದರಿಯಲ್ಲೇ ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಿಸಲಾಗುವುದು ಎಂದು ತಿಳಿಸಿದರು.2014ರಲ್ಲಿ ನಾನು ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದಾಗ ಅತ್ಯಂತ ಕಡಿಮೆ ಅಂತರದಿಂದ ಸೋತಿದ್ದೆ. ಈಗ ನನ್ನ ಮಗ ಇಲ್ಲಿ ಸ್ಪರ್ಧಿಸುತ್ತಿದ್ದಾನೆ. ಈ ಬಾರಿ ಪ್ರಚಾರಾರ್ಥ ಎಲ್ಲೇ ಹೋದರೂ ಜನರು ಅತ್ಯಂತ ಪ್ರೀತಿ ತೋರಿಸುತ್ತಿದ್ದಾರೆ. ಯುವಕನಾಗಿರುವ, ಇದೇ ಕ್ಷೇತ್ರದ ಮಗನನ್ನು ಆಯ್ಕೆ ಮಾಡುವ ಮೂಲಕ ನಮ್ಮ ಸೇವೆ ಮಾಡುವ ಅವಕಾಶ ಮಾಡಿಕೊಡಿ ಎಂದು ಲಕ್ಷ್ಮೀ ಹೆಬ್ಬಾಳಕರ್ ಮನವಿ ಮಾಡಿದರು.ಕಾಂಗ್ರೆಸ್ ಪಕ್ಷ ಮೊದಲಿನಿಂದಲೂ ಬದ್ದತೆ ಹೊಂದಿರುವ ಪಕ್ಷ. ಎಲ್ಲರನ್ನೂ ಸಮಾನವಾಗಿ ನೋಡುವ ಪಕ್ಷ ಕಾಂಗ್ರೆಸ್. ಕೊಟ್ಟ ಮಾತಿನಂತೆ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದೇವೆ. ಯಾರನ್ನೂ ದ್ವೇಷದಿಂದ ನೋಡುವ ಸಂಸ್ಕೃತಿ ನಮ್ಮದಲ್ಲ. ಯಾರಿಗೂ ಕಷ್ಟಕೊಡುವವರು ನಾವಲ್ಲ, ಕಷ್ಟದಲ್ಲಿದ್ದವರನ್ನು ಪಾರು ಮಾಡುವ ಸಂಸ್ಕೃತಿ ನಮ್ಮದು ಎಂದು ಲಕ್ಷ್ಮೀ ಹೆಬ್ಬಾಳಕರ್ ತಿಳಿಸಿದರು.

ಅಭ್ಯರ್ಥಿ ಮೃಣಾಲ ಹೆಬ್ಬಾಳಕರ್ ಮಾತನಾಡಿ, ಈ ಚುನಾವಣೆ ಸ್ವಾಭಿಮಾನದ ಚುನಾವಣೆ. ಏನೇ ಹೇಳಿದರೂ ಹೊರಗಿನವರಿಗೆ ನಮ್ಮ ಊರಿನ ಮೇಲೆ ಪ್ರೀತಿ ಬರಲು ಸಾಧ್ಯವೇ ಇಲ್ಲ. ಇಲ್ಲಿಯ ಸಮಸ್ಯೆಗಳೂ ಅವರಿಗೆ ಗೊತ್ತಿರುವುದಿಲ್ಲ. ಅಲ್ಲೇ ಏನೂ ಕೆಲಸ ಮಾಡದವರು ಇಲ್ಲಿ ಬಂದು ಏನು ಕೆಲಸ ಮಾಡಲು ಸಾಧ್ಯ? ಎಂದು ಪ್ರಶ್ನಿಸಿದರು.

ಬೆಳಗಾವಿ ದಕ್ಷಿಣ ಕ್ಷೇತ್ರ ಸೇರಿದಂತೆ ನಾನು ಇಡೀ ಕ್ಷೇತ್ರದಲ್ಲಿ ಕಳೆದ 10 ವರ್ಷದಿಂದ ಓಡಾಡುತ್ತಿದ್ದೇನೆ. ಸ್ಥಳೀಯನಾಗಿದ್ದರಿಂದ ಇಲ್ಲಿನ ಜನರು ನನಗೆ ಚಿರಪರಿಚಿತರು. ಕ್ಷೇತ್ರದ ಸಮಸ್ಯೆ ಮತ್ತು ಅಭಿವೃದ್ಧಿ ಕುರಿತು ನನಗೆ ಸ್ಪಷ್ಟವಾದ ಕಲ್ಪನೆ ಇದೆ. ಹಾಗಾಗಿ ನನ್ನನ್ನು ಆಯ್ಕೆ ಮಾಡಿದಲ್ಲಿ ಮುಂದಿನ 5 ವರ್ಷ ಅವಿಶ್ರಾಂತವಾಗಿ ಕೆಲಸ ಮಾಡುತ್ತೇನೆ ಎಂದು ಅವರು ತಿಳಿಸಿದರು.

ಬೆಳಗಾವಿ ದಕ್ಷಿಣ ವಿಧಾನಸಭಾ ಕ್ಷೇತ್ರದ ವಡಗಾವಿಯ ವಜೆ ಗಲ್ಲಿಯಲ್ಲಿ ಸಾರ್ವಜನಿಕ ಸಭೆ, ಅನಗೋಳದಲ್ಲಿ ಜೈನ ಸಮಾಜದ ಸಭೆ, ವಡಗಾವಿ ಹಾಗೂ ಖಾಸಬಾಗದಲ್ಲಿ ಯುವಕ ಸಂಘಗಳ ಸಭೆಗಳಲ್ಲಿ ಮತ ಯಾಚಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಪ್ರದೀಪ ಎಂ.ಜೆ., ಪರಶುರಾಮ ಢಗೆ, ವಸಂತ ನಾಗೂಜಿಚೆ, ದತ್ತಾ ಪವಾರ, ಪ್ರಭಾಕರ ಹಟ್ಟಿಕರ್, ಆನಂದ ಮಾಳವಿ, ಮೀನಾಕ್ಷಿ ನಲವಡೆ, ಮಾಧುರಿ ಜಾಧವ, ಲಕ್ಷ್ಮೀ ಲುಕುರೆ, ರಮೇಶ ಸೊಂಟಕ್ಕಿ, ವೈಶಾಲಿ ಸುತಾರ, ಗಜಾನನ ಜಾಧವ, ಯಲ್ಲಪ್ಪ ಜಾಧವ, ಶ್ರೀಕಾಂತ ಲುಕುರೆ, ಸುನೀಲ ಹನಮಣ್ಣವರ, ರಾಜೇಂದ್ರ ಹನಮಣ್ಣವರ, ಪುಷ್ಪ ಹನಮಣ್ಣವರ, ರಾಜಶೇಖರ ಬೆಂಡಿಗೇರಿ, ಭರತಕುಮಾರ್ ಗಡ್ಕರಿ, ಜಯಗೌಡ ಪಾಟೀಲ, ರಾಜೇಂದ್ರ ಜಕ್ಕನವರ, ಪ್ರಭಾವತಿ ಮಾಸ್ತಮರಡಿ, ಶೀತಲ್ ಮಠಪತಿ, ಸಿಖಂದರ್ ಜಮಾದಾರ, ಕಿರಣ ಪಾಟೀಲ, ಸಿರಿಲ್ ಪ್ರಭು, ಆದಿನಾಥ ಯುವಕ ಮಂಡಳದವರು, ಬ್ರಾಹ್ಮಿ ಮಹಿಳಾ ಮಂಡಳದ ಸದಸ್ಯರು ಮುಂತಾದವರು ಉಪಸ್ಥಿತರಿದ್ದರು.

# ಉಪ ಕಾನೂನು ನೆರವು ಅಭಿರಕ್ಷಕರ ಹುದ್ದೆಗಾಗಿ ಅರ್ಜಿ ಆಹ್ವಾನ

ಗದಗ ಏಪ್ರಿಲ್ 12:ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನರ ಮೇರೆಗೆ ಗದಗ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಡಿಯಲ್ಲಿ ಸ್ಥಾಪಿಸಿದ ಕಾನೂನು ನೆರವು ಅಭಿರಕ್ಷಕರ ಕಚೇರಿಯಲ್ಲಿ ಖಾಲಿ ಇರುವ ಉಪ ಕಾನೂನು ನೆರವು ಅಭಿರಕ್ಷಕರ (ಡೆಪ್ಯುಟಿ ಚೀಫ್ ಲೀಗಲ್ ಏಡ್ ಡಿಫೆನ್ಸ್ ಕೌನ್ಸಲ್ ) ಒಂದು ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ಅರ್ಜಿ ಆಹ್ವಾನಸಲಾಗಿದೆ.

ಅರ್ಜಿ ಭರ್ತಿ ಮಾಡಿ ಅವಶ್ಯಕ ದಾಖಲೆಗಳನ್ನು ಸ್ವತ: ದೃಢೀಕರಿಸಿ ಲಗತ್ತಿಸಿ ಎಪ್ರಿಲ್ 24 ರ ಸಂಜೆ 5 ಗಂಟೆಯೊಳಗಾಗಿ ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾದಿಕಾರ, ಜಿಲ್ಲಾ ನ್ಯಾಯಾಲಯದ ಸಂಕೀರ್ಣ , ಗದಗ ಕಚೇರಿಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಗದಗ ಜಿಲ್ಲಾ ನ್ಯಾಯಾಲಯದ ವೆಬ್‌ಸೈಟ್ https://gadag .dcourts.gov.in ಮೂಲಕ ಅಥವಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕಚೇರಿಯನ್ನು ಸಂಪರ್ಕಿಸುವಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ. ಗುರುಪ್ರಸಾದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರೈತರ ಅಭಿವೃದ್ಧಿಗೆ ಮೋದಿ ಸರಕಾರ ಅವಶ್ಯಕ



ಗದಗ,: ಕಾರ್ಯಕರ್ತರಿಂದಲೇ ಪಕ್ಷ ಎಂದು ಕಾರ್ಯಕರ್ತರೊಂದಿಗೆ ಸಂವಾದ ನಡೆಸಿ ಮೋದಿ ಸರಕಾರ ಹಾಗೂ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದಾಗ ರೈತ ಪರ ಕಾಳಜಿಯಿಂದ ರೈತ ವಿದ್ಯಾನಿಧಿ ಎಂಬ ಯೋಜನೆ ಮೂಲಕ ರೈತ ಮಕ್ಕಳ ಶಿಕ್ಷಿತರಾಗಿಲಿ ಎಂಬ ದೂರು ದೃಷ್ಠಿ ಯೋಜನೆ ರೂಪಿಸಿದ್ದರು. ರೈತ ಫಸಲ ಭೀಮಾಯೋಜನೆ ಮೂಲಕ ರೈತರಿಗೆ ಕಷ್ಟಕಾಲದಲ್ಲಿ ಬೇನ್ನೆಲುಬುಗಾಗಿ ನೀತಿದೆ ಹಾಗಾಗಿ ರೈತರ ಉಳಿವಿಗಾಗಿ ಬಿಜೆಪಿ ಹಾವೇರಿ–ಗದಗ ಲೋಕಸಭಾ ಅಭ್ಯರ್ಥಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರನ್ನು ಹೆಚ್ಚು ಬಹುಮತದಿಂದ ಗೆಲಿಸಬೇಕು ಎಂದು ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷರು ಮಾಜಿ ಶಾಸಕರು ಎ.ಎಸ್. ಪಾಟೀಲ ನಡಹಳ್ಳಿ ಮಾತನಾಡಿದರು.

ಅವರು ಪಕ್ಷದ ಕಾರ್ಯಾಲಯದಲ್ಲಿ ಜರುಗಿದ ರೈತ ಮೋರ್ಚಾ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದರು.

ಪಾರ್ಟಿ ಸಂಘಟನೆ ದೃಷ್ಠಿಯಿಂದ ನಮ್ಮ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಹೇಳಿದಂತೆ ಮೆರಾ ಬೂತ್ ಸಬಸೇ ಮಜಬೂತ್ ಹೇ ಎಂಬುವಂತೆ ಪಕ್ಷ ನೀಡಿರುವ ಕರ ಪತ್ರಗಳಲ್ಲಿ ಮೋದಿ ಸರಕಾರ ಬಡವರ ಸಮರ್ಪಿತ ಸರಕಾರದ ಸಾಧನೆಗಳ ಬಗ್ಗೆ ತಿಳಿಸಲಾಗಿದ್ದು ಅದನ್ನು ನಮ್ಮ ಬೂತಿನ ಮನೆ ಮನೆಗೆ ತಲುಪಿಸಿ ಮೋದಿ ಸರಕಾರದ ಸಾಧನೆಗಳನ್ನು ಜನರಿಗೆ ತಿಳಿಸಿ ಸಂಪೂರ್ಣ ಬೂತ್‌ನ್ನು ಭಾರತಿಯ ಜನತಾ ಪಕ್ಷಕ್ಕೆ ಮತ ಹಾಕುವಂತೆ ತಿಳಿಸಬೇಕೆಂದು ಕರ್ನಾಟಕ ರಾಜ್ಯ ರೈತ ಮೋರ್ಚಾ ಉಪಾಧ್ಯಕ್ಷರು ಭಾರತಿ ಅಳವಂಡಿ ಹೇಳಿದರು.

ರೈತರ ಪರ ಸಾಕಷ್ಟು ಯೋಜನೆಗಳನ್ನು ರೂಪಿಸಿದ ಬಿಜೆಪಿ ಸರಕಾರ ಈ ಹಿಂದ ಬರಕಾಲ ಬಿದ್ದಾರ ಪ್ರತಿ ಹೇಕ್ಟರ್‌ಗೆ 25 ಸಾವಿರ ದಿಂದ 40 ಸಾವಿರ ರೂಪಾಯಿಗಳನ್ನು ಬರ ಪರಿಹಾರ ನೀಡಿ ಸಂಕಷ್ಟದಲ್ಲಿ ರೈತರ ಬೆನ್ನಿಗೆ ನಂತಿತ್ತು ಆದರೆ ಇಂದಿನ ಕಾಂಗ್ರೆಸ್ ಸಿದ್ಧರಾಮಯ್ಯ ಸರಕಾರ ಕೇವಲ 2 ಸಾವಿರ ನೀಡಿರುವುದು ಖಂಡನೀಯ ಎಂದು ಗದಗ ಜಿಲ್ಲಾ ಬಿಜೆಪಿ ಅಧ್ಯಕ್ಷರಾದ ರಾಜು ಕುರುಡಗಿ ಮಾತನಾಡಿದರು. ಈ ಹಿಂದ ಮನಮೋಹನ ಸರಕಾರದಲ್ಲಿ ಭಾತರದ ಆರ್ಥಿಕವಾಗಿ 12 ನೇ ಸ್ಥಾನದಲ್ಲಿತ್ತು 2014 ರಿಂದ ದೇಶದ ಆರ್ಥಿಕ ನೀತಿಯನ್ನು ದೇಶ ಅಭಿವೃದ್ಧಿ ಪೂರಕವಾಗಿ ರೂಪಸಿ ಇಂದು ಜಗತ್ತಿನಲ್ಲಿ 5ನೇ ಆರ್ಥಿಕ ಸದೃಢ ದೇಶವನ್ನಾಗಿ ಮಾಡಿದ್ದ ಭಾರತೀಯ ಜನತಾ ಪಕ್ಷದ ನರೇಂದ್ರ ಮ ಓದಿ ಸರಕಾರ ಬರುವ ವರ್ಷಗಳಲ್ಲಿ ಭಾರತವನ್ನು ನಂ 1 ದೇಶವನ್ನಾಗಿ ಮಾಡುವದಾಗಿ ಪಣತೋಟಿದೆ. ಯಡಿಯೂರಪ್ಪ ಹಾಗೂ ಬಸವರಾಜ ಬೋಮ್ಮಾಯಿ ಸರಕಾರದ ಸಮಯದಲ್ಲಿ ರೈತರಿಗೆ ಕೇಂದ್ರ ಸರಕಾರದಿಂದ 6 ಸಾವಿರ ರಾಜ್ಯ ಸರಕಾರದಿಂದ 4 ಸಾವಿರ ಖಾತೆಗೆ ನೇರವಾಗಿ ಸಂದಾಯವಾಗುತ್ತಿತ್ತು ಅದನ್ನು ಇಂದಿನ ಕಾಂಗ್ರೆಸ್ ಸರಕಾರ ನಿಲ್ಲಿಸಿದ್ದ ರೈತರ ವಿರೋಧಿ ಸರಕಾರ ಕಾರಣ ಮೋದಿಯವರ ಕೈ ಬಲ ಪಡಿಸಲು ಬಸವರಾಜ ಬೋಮ್ಮಾಯಿಯವರೊಗೆ 3 ಲಕ್ಷ್ ಮತಗಳಿಂದ ಗೆಲ್ಲಿಸಿ ಆರಿಸಿ ಕಳಿಸಬೇಕಾಗಿದೆ ಎಂದು ಬೋಮ್ಮಾಯಿ ಅವರ ಪುತ್ರ ಭರತ್ ಬೋಮ್ಮಾಯಿ ಹೇಳಿದರು.

ಈ ಸಂದರ್ಭದಲ್ಲಿ ಬಸವರಾಜ ಇಟಗಿ ಅಧ್ಯಕ್ಷರು ಬಿಜೆಪಿ ರೈತ ಮೋರ್ಚಾ, ಆಶೋಕ ಕರೂರ ಕಾರ್ಯದರ್ಶಿ, ಜಿಲ್ಲಾ ವಕ್ತಾರರು ಎಂ.ಎಂ. ಹಿರೇಮಠ ರಾಜು ಕುಲಕರ್ಣಿ ನಿಕಟ ಪೂರ್ವ ಅಧ್ಯಕ್ಷರು, ಎಂ.ಎಸ್. ಕರಿಗೌಡರ, ಆರ್.ಕೆ. ಚನ್ವಾಣ, ವೀರಣ್ಣ ಅಂಗಡಿ, ಪಕ್ಕಿರೇಶ ರಟ್ಟಿಹಳ್ಳಿ, ಮಾದ್ಯಮ ಸಂಚಾಲಕ ರಾಜೇಂದ್ರಪ್ರಸಾದ ಹೊನ್ನಗಲ್, ಕಾನೂನು ಪ್ರಕೋಷ್ಠದ ಜಿಲ್ಲಾ ಸಂಚಾಲಕರು ಕೆ.ಪಿ. ಕೋಟಿಗೌಡರ, ವಿನೋದ ಹೌಸನೂರು ಸೇರಿದಂತೆ ಮುಂತಾದವರು ಇದ್ದರು.

# ಕಾಲರಾ ಕಾಯಿಲೆ ಹರಡದಂತೆ ಸಾರ್ವಜನಿಕರಿಗೆ ಅನುಸರಿಸಬೇಕಾದ ಮುನ್ನೆಚ್ಚರಿಕೆ ಕ್ರಮ

ಗದಗ ಏಪ್ರಿಲ್ 12: ಕಾಲರಾ ಪ್ರಕರಣಗಳು ವರದಿಯಾಗುತ್ತಿರುವ ಹಿನ್ನೆಲೆ ಅಗತ್ಯ ಮುನ್ನೆಚ್ಚರ ವಹಿಸುವಂತೆ ಸಾರ್ವಜನಕರಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ನೀಲಗುಂದ ಅವರು ಮನವಿ ಮಾಡಿದ್ದಾರೆ.

ಕಾಲರವು ವಿಬ್ರಿಯೋ ಕಾಲರಾ ಎಂಬ ಬ್ಯಾಕ್ಟೀರಿಯಾದಿಂದ ಹರಡುವ ಕಾಯಿಲೆಯಾಗಿದ್ದು, ಈ ಬ್ಯಾಕ್ಟೀರಿಯಾ ಮನುಷ್ಯರ ದೇಹದಲ್ಲಿ ಕಲುಷಿತ ನೀರನ್ನು ಕುಡಿಯುವುದರಿಂದ ಮತ್ತು ಕಲುಷಿತ ಆಹಾರ ಸೇವಿಸುವುದರ ಮುಖಾಂತರ ಪ್ರಸರಣವಾಗುತ್ತದೆ.

ಇದರಿಂದ ಅತೀಸಾರ, ವಾಕರಿಕೆ, ವಾಂತಿ, ನಿರ್ಜಲೀಕರಣ ಮತ್ತು ಸ್ನಾಯು ಸೆಳೆತದಂತಹ ಸಮಸ್ಯೆಗಳು ಉದ್ಭವಿಸುತ್ತವೆ. ಸಾರ್ವಜನಕರು ಕಾಲರಾ ರೋಗ ಹರಡದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವಂತೆ ಕೋರಿದ್ದಾರೆ.

ಮಾಡಬೇಕಾಗಿರುವುದು : ಕುದಿಸಿ ಆರಿಸಿದ ನೀರನ್ನು ಕುಡಿಯುವುದು. ಸಾರ್ವಜನಕರು ನೀರಿನ ಕೊಳಾಯಿ ಮತ್ತು ಸ್ಥಳವನ್ನು ಸ್ವಚ್ಛವಾಗಿ ಇಡುವುದು. ತಾಜಾ ಹಣ್ಣುಗಳು, ತರಕಾರಿಗಳನ್ನು ಮತ್ತು ಆಹಾರ ಪದಾರ್ಥಗಳನ್ನೇ ಉಪಯೋಗಿಸುವುದು. ಊಟ ತಯಾರಿಸುವ ಮತ್ತು ಊಟ ಮಾಡುವ ಮುನ್ನ ಕೈಗಳನ್ನು ಸಾಬೂನು ಮತ್ತು ನೀರಿನಂದ ಸ್ವಚ್ಛಗೊಳಿಸುವುದು. ಶೌಚಾಲಯವನ್ನು ಉಪಯೋಗಿಸುವ ಮುಂಚೆ ಮತ್ತು ನಂತರ ಕೈಗಳನ್ನು ಸಾಬೂನನಂದ ಸ್ವಚ್ಛಗೊಳಿಸುವುದು. ಸಿದ್ಧಪಡಿಸಿದ ಆಹಾರ ಪದಾರ್ಥಗಳ ಮೇಲೆ ಕ್ರಿಮಿಕೀಟಗಳು ಕುಳಿತುಕೊಳ್ಳದಂತೆ ಸದಾ ಮುಚ್ಚಳದಿಂದ ಮುಚ್ಚಿಡುವುದು. ನಮ್ಮ ಮನೆ ಮತ್ತು ಸುತ್ತ ಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಡುವುದು. ಚಹಾ ಅಂಗಡಿಗಳಲ್ಲಿ ಶುದ್ಧ ಕುಡಿಯುವ ನೀರನ್ನೇ ಉಪಯೋಗಿಸುವುದು ಹಾಗೂ ಸ್ವಚ್ಛತೆಯನ್ನು ಕಾಪಾಡುವುದು.

ಮಾಡಬಾರದ್ದು : ಸೋರಿಕೆ ಇರುವ ಕೊಳಾಯಿ ನೀರನ್ನು ಕುಡಿಯಬಾರದು. ಪಾದಚಾರಿ ರಸ್ತೆಗಳಲ್ಲಿ, ರಸ್ತೆ ಬದಿಗಳಲ್ಲಿ ಮಾರಾಟ ಮಾಡುವ ತಿನಸುಗಳು ಹಾಗೂ ತಳ್ಳು ಗಾಡಿಗಳಲ್ಲಿ ಮಾರುವ, ಕತ್ತರಿಸಿದ ಹಣ್ಣು, ಪದಾರ್ಥಗಳನ್ನು ತಿನ್ನಬಾರದು. ಧೂಳು, ನೊಣ, ಜಿರಳೆಗಳು ಇತರೇ ಕೀಟಗಳು ಮುತ್ತುವಂತೆ ತೆರೆದಿಟ್ಟಿರುವ ಆಹಾರ ಪದಾರ್ಥಗಳನ್ನು ಸೇವಿಸಬಾರದು. ಕಸ ಮತ್ತು ಇತರೆ ತ್ಯಾಜ್ಯ ವಸ್ತುಗಳನ್ನು ರಸ್ತೆಬದಿ, ಪಾದಚಾರಿ ರಸ್ತೆ, ಮೋರಿಯಲ್ಲಿ ಹಾಕಬಾರದು. ಹಾಕಿದಲ್ಲಿ ಕ್ರಿಮಿಕೀಟಗಳು ಆಕರ್ಷಿಸಿ ಕರಳುಬೇನೆ/ ಕಾಲರಾ ಬರುವ ಸಂಭವವಿರುತ್ತವೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಅವರು ಕೋರಿದ್ದಾರೆ.

# ಮೃತ ದೇಹವನ್ನು ವೈದ್ಯಕೀಯ ಕಾಲೇಜುಗಳಿಗೆ ದಾನ ನೀಡುವುದರಿಂದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಉಪಕಾರ ಮಾಡಿದಂತೆ




ಗದಗ: ವೈದ್ಯಕೀಯ ವಿದ್ಯಾರ್ಥಿಗಳು ಭವಿಷ್ಯದಲ್ಲಿ ಉತ್ತಮ ವೈದ್ಯರಾಗಬೇಕಾದರೆ ಶರೀರ ರಚನೆ ಹಾಗೂ ಪ್ರತಿ ಅಂಗದ ಕಾರ್ಯ ಕುರಿತು ನಿಖರವಾದ ಜ್ಞಾನವಿರಬೇಕು. ಈ ಅವಶ್ಯಕ ಜ್ಞಾನಕ್ಕಾಗಿ ಶರೀರವನ್ನು ಛೇದಿಸಿ ಅದನ್ನು ಅಭ್ಯಾಸ ಮಾಡಬೇ ಕಾಗುತ್ತದೆ. ಈ ಕಾರಣಕ್ಕಾಗಿ ಮೃತದೇಹದ ಅವಶ್ಯಕತೆ ಇದೆ. ಸುಶಿಕ್ಷಿತ ಸಮಾಜದಲ್ಲಿ ಮೃತದೇಹವನ್ನು ಮಣ್ಣಿನಲ್ಲಿ ಹೂಳುವುದು ಅಥವಾ ಅಗ್ನಿ ಸ್ಪರ್ಶಮಾಡಿ ಅದನ್ನು ಪ್ರಕೃತಿಯಲ್ಲಿ ವಿಲೀನಗೊಳಿಸಲಾಗುತ್ತದೆ. ಹೀಗೆ ಮಾಡದೆ ಮೃತದೇಹವನ್ನು ವೈದ್ಯಕೀಯ ಕಾಲೇಜುಗಳಿಗೆ ದಾನ ನೀಡುವುದರಿಂದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಉಪಕಾರ ಮಾಡಿದಂತೆ ಹಾಗೂ ಸ್ವಸ್ಥ ಸಮಾಜವನ್ನು ನಿರ್ಮಾಣ ಮಾಡುವಲ್ಲಿ ಮಹತ್ತರ ಪಾತ್ರವನ್ನು ವಹಿಸಿದಂತಾಗುವುದು ಎಂದು ಡಿ.ಜಿ.ಎಮ್ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ಪ್ರಾಧ್ಯಪಕರಾದ ಡಾ. ಕುಮಾರ ಕಂಠಿಮಠರವರು ರೋಟರಿಯ ಸಾಪ್ತಾಹಿಕ ಸಭೆಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ಸಾರ್ವಜನಕರು ಮೃತ ನಂತರ ತಮ್ಮ ದೇಹವನ್ನು ವೈದ್ಯಕೀಯ ಕಾಲೇಜಿಗೆ ದಾನ ನೀಡಬೇಕೆಂದು ವಿನಂತಿಸಿದರು. ಮೃತ ವ್ಯಕ್ತಿಯು ದೇಹವನ್ನು ದಾನ ನೀಡಲು ಬೇಕಾಗಿರುವ ಅರ್ಹತೆ ಹಾಗೂ ವಾರಸುದಾರರ ಒಪ್ಪಿಗೆ ಹಾಗು ವ್ಯಕ್ತಿಯು ನೈಸರ್ಗಿಕವಾಗಿ ಸಾವನ್ನಪ್ಪಿರಬೇಕೆಂದು ತಿಳಿಸಿದರು. ಈ ಸಂಧರ್ಭದಲ್ಲಿ ಹಿರಿಯರಾದ ಶ್ರೀಮತಿ. ರತ್ನಾ ಶಿದ್ರಾಮಪ್ಪ ಯಳಮಲಿಯವರು ಮೃತ ನಂತರ ತಮ್ಮ ದೇಹವನ್ನು ಡಿ.ಜಿ.ಎಮ್. ಆಯುರ್ವೇದಿಕ ವೈದ್ಯಕೀಯ ಕಾಲೇ ಜಿಗೆ ದಾನ ನೀಡಲು ಒಪ್ಪಿಗೆ ನೀಡಿದರು. ಸಂಸ್ಥೆಯ ಅಧ್ಯಕ್ಷರಾದ ರೊ. ಚಂದ್ರಮೌಳಿ ಜಾಲಿಯವರು ಸರ್ವರನ್ನು ಸ್ವಾಗತಿಸಿದರು. ರೊ. ಬಾಲ ಕೃಷ್ಣ ಪಿ ಕಾಮತ್ ಅತಿಥಿಗಳ ಹಾಗೂ ಆತಿಥ್ಯವಹಿಸಿದ ರೊ. ವಿಶ್ವನಾಥ ಯಲಮಲಿವರನ್ನು ಸಭೆಗೆ ಪರಿಚಯಿಸಿದರು. ಈ ಕಾರ್ಯಕ್ರಮದಲ್ಲಿ ರೋಟರಿ ಸಂಸ್ಥೆಯ ಸದಸ್ಯರಾದ ರೊ. ಡಾ. ಕಮಲಾಕ್ಷಿ ಅಂಗಡಿ, ಎಸ್.ಎಸ್.ಹೊಸಳ್ಳಿಮಠ, ರೊ. ಕಿಶೋರ ರೇವಣಕರ, ಡಾ. ರಾಜೇಂದ್ರ ಗಚ್ಚಿನಮಠ, ಡಾ. ಜಿ. ಬಿ. ಪಾಟೀಲ, ಡಾ ಪ್ರದೀಪ್ ಉಗಲಾಟ, ಡಾ. ಆರ್. ಬಿ. ಉಪ್ಪಿನ, ರೊ. ಶಿವಾಚಾರ್ಯ ಹೊಸಳ್ಳಿಮಠ, ರೊ. ಅಕ್ಷಯ ಶೆಟ್ಟಿ ಮುಂತಾದವರು ಉಪಸ್ಥಿತರಿದ್ದರು. ಸಂಸ್ಥೆಯ ಕಾರ್ಯದರ್ಶಿಗಳಾದ ವೀಣಾ ತಿರ್ಲಾಪುರ ನಿರೂಪಿಸಿ ವಂದಿಸಿದರು.

# ಸಾಮಾನ್ಯ ಪ್ರವೇಶ ಪರೀಕ್ಷಾ ಕೇಂದ್ರಗಳ ಸುತ್ತಲೂ ಪ್ರತಿಬಂಧಕಾಜ್ಞೆ ಜಾರಿ

ಗದಗ ಏಪ್ರಿಲ್ 12: 2024ನೇ ಸಾಲಿನ ಇಂಜನೀಯರಿಂಗ್, ಕೃಷಿ ವಿಜ್ಞಾನ, ವೆಟರಿನರಿ, ಫಾರ್ಮಸಿ, ಬಿ.ಎಸ್.ಸಿ (ನರ್ಸಿಂಗ್) ಮುಂತಾದ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಏಪ್ರಿಲ್ 18 ಮತ್ತು 19 ರಂದು ನಡೆಸಲಿದೆ. ಜಿಲ್ಲೆಯಲ್ಲಿ ಒಟ್ಟು 12 ಪರೀಕ್ಷಾ ಕೇಂದ್ರಗಳಿದ್ದು ಪರೀಕ್ಷಾ ಸಮಯದಲ್ಲಿ ನಕಲು ಮಾಡುವುದು, ಪರೀಕ್ಷಾರ್ಥಿಗಳ ಬದಲು ಬೇರೆಯವರು ಪರೀಕ್ಷೆಗೆ ಹಾಜರಾಗುವುದು ಮುಂತಾದ ಅವ್ಯವಹಾರ ತಡೆಗಟ್ಟಲು ಮತ್ತು ಪರೀಕ್ಷಾ ಕೇಂದ್ರಗಳಲ್ಲಿ ಶಿಸ್ತು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡಲು ಪರೀಕ್ಷಾ ಕೇಂದ್ರಗಳ ಸುತ್ತಲೂ 200ಮೀಟರ್ ಪರಿಮಿತಿ ಯೊಳಗೆ ಎಪ್ರಿಲ್ 18 ಮತ್ತು 19 ರಂದು ಬೆಳಿಗ್ಗೆ 9.30 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಪ್ರತಿಬಂಧಕಾಜ್ಞೆ ಜಾರಿಗೊ ಳಿಸಲಾಗಿದೆ. ಪರೀಕ್ಷಾರ್ಥಿಗಳು ಹಾಗೂ ಪರೀಕ್ಷೆಯಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಹೊರತುಪಡಿಸಿ ಇತರ ಯಾವುದೇ ವ್ಯಕ್ತಿ ಅಥವಾ ಐದು ಐದಕ್ಕಿಂತ ಹೆಚ್ಚು ಜನರು ಗುಂಪು ಕೂಡುವುದು, ಅಥವಾ ವ್ಯಕ್ತಿಗಳ ಗುಂಪುಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಈ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಝೆರಾಕ್ಸ್ ಅಂಗಡಿ, ಬುಕ್ ಸ್ಟಾಲ್ , ಫೋಟೋ ಕಾಪಿಯರ್ಗಳನ್ನು ಬಂದ ಮಾಡಲು ಆದೇಶಿಸಿದೆ. ಪರೀಕ್ಷಾ ಕೇಂದ್ರಗಳಲ್ಲಿ ಮೊಬೈಲ್ ಫೋನ್ ಮತ್ತು ಇತರೇ ಸಂಪರ್ಕ ಸಲಕರಣೆಗಳನ್ನು ತರುವುದನ್ನು ನಿಷೇಧಿಸಲಾಗಿದೆ. ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯ ಒಳಗೆ ಯಾವುದೇ ರೀತಿಯ ಕೈಗಡಿಯಾರವನ್ನು ಕಟ್ಟಿಕೊಂಡು ತೆಗೆದುಕೊಂಡು ಹೋಗುವಂತಿಲ್ಲ. ಅಭ್ಯರ್ಥಿಗಳು ಕ್ಯಾಲ್ಕುಲೇಟರ್ ಮತ್ತು ಟೇಬಲ್‌ಗಳನ್ನು ಪರೀಕ್ಷಾ ಸಮಯದಲ್ಲಿ ಉಪಯೋಗಿಸುವುದನ್ನು ನಿಷೇ ಧಿಸಿದೆ. ಮೊಬೈಲ್ ಫೋನ್ , ಬ್ಲೂಟೂಥ್ , ಸ್ಲೈಡ್ ರೂಲ್ಸ್ , ಕ್ಯಾಲ್ ಕ್ಯುಲೇಟರ್ , ವೈಟ್ ಫ್ಲ್ಯುಯಿಡ್ , ವೈರ್ ಲೆಸ್ ಸೆಟ್ಸ್ , ಪೇಪರ್ ಚೀಟಿ , ಬುಕ್ಸ್ / ಪುಸ್ತಕ ಇತ್ಯಾದಿಗಳನ್ನು ತರುವುದನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಆದೇಶಿಸಿದ್ದಾರೆ.